**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು – 560001**

ಸಂಖ್ಯೆ:–ಸಿ4(7)ಪ್ರಾಪ್ರೌಶಿ.ಸಂ ಆಯ್ಕೆ 16/2013–14 ದಿನಾಂಕ. 09/07/2014

**ಜ್ಞಾಪನ**

ವಿಷಯ: ರಾಜ್ಯದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ಖಾಲಿ ಇರುವ ಶಿಕ್ಷಣ ಸಂಯೋಜಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

ಉಲ್ಲೇಖ:1. ಈ ಕಛೇರಿಯ ಅಧಿಸೂಚನೆ ಸಮಸಂಖ್ಯೆ ದಿನಾಂಕ: 14.08.2013.

2. ಈ ಕಛೇರಿಯ ಜ್ಞಾಪನ ಸಮಸಂಖ್ಯೆ ದಿನಾಂಕ:07.07.2014

**************

ಉಲ್ಲೇಖ(1)ರಲ್ಲಿ ರಾಜ್ಯದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಲ್ಲಿ ಶಿಕ್ಷಣ ಸಂಯೋಜಕರ ಹುದ್ದೆಗಳನ್ನು ತುಂಬುವ ಪ್ರಕ್ರಿಯೆಗೆ ಚಾಲನೆ ನೀಡಲು ಈ ಕೆಳಗಿನ ದಿನಾಂಕಗಳಲ್ಲಿ ಕೌನ್ಸಿಲಿಂಗ್ ನಡೆಸಲು ಸೂಚಿಸಿರುವುದಕ್ಕೆ ಭಾಗಶಃ ತಿದ್ದುಪಡಿ ಮಾಡಿದಂತೆ ಹಾಗೂ ಈ ಕೆಳಗಿನಂತೆ ಕ್ರಮವಹಿಸಲು ಸೂಚಿಸಿದೆ.

ಪ್ರಸ್ತುತ ಶಿಕ್ಷಣ ಸಂಯೋಜಕರಾಗಿ ಕಾರ್ಯನಿರ್ವಹಿಸುತ್ತಿರುವವರಿಗೆ **ದಿನಾಂಕ 10.07.2014** ರಂದು ನಡೆಯಬೇಕಿದ್ದ ಕೌನ್ಸಿಲಿಂಗ್ **ದಿನಾಂಕವನ್ನು 12.07.2014ಕ್ಕೆ** ಮುಂದೂಡಿದೆ.

ಜೇಷ್ಠತಾ ಪಟ್ಟಿಯಲ್ಲಿ ಇರುವವರಿಗೆ ಮೂರು ವರ್ಷಗಳ ಗರಿಷ್ಠ ಅವಧಿಯ ಷರತ್ತಿಗೊಳಪಟ್ಟು ಶಿಕ್ಷಣ ಸಂಯೋಜಕರ ಹುದ್ದೆಗಳಿಗೆ **ದಿನಾಂಕ. 11.07.2014** ರಂದು ಕೌನ್ಸಿಲಿಂಗ್ ಮೂಲಕ ಸ್ಥಳನಿಯುಕ್ತಿಗೊಳಿಸುವುದು. (ಈ ದಿನಾಂಕದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ)

**ಸೂಚನೆಗಳು:–**

1. ಪ್ರಸ್ತುತ ಖಾಲಿ ಇರುವ ಮತ್ತು ನೇರನೇಮಕಾತಿಗಾಗಿ ಕಾಯ್ದಿರಿಸಿರುವ ಹುದ್ದೆಗಳನ್ನು ಸಹ ಕೌನ್ಸಿಲಿಂಗ್‌ಗೆ ನೀಡುವುದು. ಆದರೆ ವಿಷಯ ಹೊಂದಾಣಿಕೆ ಮತ್ತು ನೇರ ನೇಮಕಾತಿ ಕಾಯ್ದಿರಿಸಿದ ಹುದ್ದೆಗಳ ಸಂಖ್ಯೆಗೆ ತೊಂದರೆಯಾಗದ ರೀತಿ ಮಾಡತಕ್ಕದ್ದು.
2. ದಿನಾಂಕ: 31.10.2014 ರೊಳಗೆ ವಯೋನಿವೃತ್ತಿಯಿಂದ ತೆರವಾಗುವ ಹುದ್ದೆಗಳನ್ನು ಸಹ ಕೌನ್ಸಿಲಿಂಗ್ ನೀಡುವುದು, ಇಂತಹ ಹುದ್ದೆಗಳಿಗೆ ಸ್ಥಳನಿಯುಕ್ತಿ ಪಡೆದಲ್ಲಿ ಶಿಕ್ಷಣ ಸಂಯೋಜಕರು ಬಿಡುಗಡೆಯಾದ ನಂತರ ಈ ಹುದ್ದೆಯನ್ನು ಆಯ್ಕೆ ಮಾಡಿಕೊಂಡ ಶಿಕ್ಷಕರು ಶಿಕ್ಷಣ ಸಂಯೋಜಕ ಹುದ್ದೆಗೆ ಹಾಜರಾಗುವಂತೆ ಕ್ರಮವಹಿಸುವುದು.
3. ಪ್ರಾಥಮಿಕ ಶಿಕ್ಷಣ ಸಂಯೋಜಕರ ಹುದ್ದೆಗಳಿಂದ ಪ್ರಾಥಮಿಕ ಶಾಲಾ ಪದವಿಧರೇತರ ಮುಖ್ಯ ಶಿಕ್ಷಕರ ಹುದ್ದೆಗಳಿಗೆ ಹಾಗೂ ಪ್ರೌಢಶಾಲಾ ಶಿಕ್ಷಣ ಸಂಯೋಜಕರ ಹುದ್ದೆಗಳಿಂದ ಪ್ರೌಢಶಾಲಾ ಸಹ ಶಿಕ್ಷಕರ ಹುದ್ದೆಗಳಿಗೆ ಸ್ಥಳನಿಯುಕ್ತಿಗೊಳಿಸಿದ ನಂತರ ಇಂತಹ ಹುದ್ದೆಗಳನ್ನು ಶಾಲಾ ಡೈಸ್‌ಕೋಡ್‌ನೊಂದಿಗೆ ಆಯಾ ಜಿಲ್ಲಾ ಉಪನಿರ್ದೇಶಕರು ಇ–ಆಡಳಿತ ವಿಭಾಗದ (ಶ್ರೀ ಎಂ.ಎಂ.ಶಿವಕುಮಾರ್, ಹಿರಿಯ ಕಂಪ್ಯೂಟರ್ ಪ್ರೋಗ್ರಾಮರ್, ಎಸ್.ಎಸ್.ಎ, ಬೆಂಗಳೂರು ಮೊಬೈಲ್–9448999499) ಇ–ಮೇಲ್ ವಿಳಾಸ (software developementcentre@gmail.com) ಕಳುಹಿಸಿಕೊಡುವುದು.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು

ಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ರವರುಗಳ ಮುಂದಿನ ಕ್ರಮಕ್ಕಾಗಿ
2. ಕಛೇರಿ ಪ್ರತಿ.